ಈ ದಿನ ದಿನಾಂಕಃ 28.08.2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆ ವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿವೆ.

ನನ್ನ ಪ್ರಕರಣಕ್ಕೆ ಪೂರಕವಾಗಿ ಈ ಕೆಳಗಿನ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗೆ ಒಳಪಡಿಸಲು ವಿನಂತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೆ ಒಳಪಡಿಸಲಾಯಿತು.

| ಕ್ರ.ಸಂ | ದಾಖಲಾತಿಯ ವಿವರ | ನಿಶಾನೆ ಸಂಖ್ಯೆ |
|---|---|---|
| 1 | ಜಿ ಪಿ ಎ | ನಿಪಿ 1 |
| 2 | ಸರ್ವೆ ನಂ. 11 ರ 2021-22 ನೇ ಸಾಲಿನ ಪಹಣಿ | ನಿಪಿ 2 |
| 3 | ಡಿಸಿ ಎಫ್ ರವರಿಗೆ ನೀಡಿದ ಲೀಗಲ್ ನೋಟಿಸ್ ನ ಪ್ರತಿ | ನಿಪಿ 3 |
| 4 | ಆರ್ ಎಫ್ ಓ ರವರಿಗೆ ನೀಡಿದ ಲೀಗಲ್ ನೋಟಿಸ್ ಪ್ರತಿ | ನಿಪಿ 4 |
| 5 | ಎಸಿ ಎಫ್ ರವರಿಗೆ ನೀಡಿದ ಲೀಗಲ್ ನೋಟಿಸ್ ಪ್ರತಿ | ನಿಪಿ 5 |
| 6 | 3 ಅಂಚೆ ರಶೀದಿಗಳು | ನಿಪಿ 6 |
| 7 | ಲ್ಯಾಮಿನೆಷನ್ ಆದ ಮತ್ತು ಮಧ್ಯದಲ್ಲಿ 4 ಬಾಗ ಹರಿದ ಪರಿಶಿಷ್ಟ-1 | ನಿಪಿ 7 |
| 8 | ಗ್ರಾಮ ನಮೂನೆ 2 ರ ದೃ.ನ | ನಿಪಿ 8 |
| 9 | ಸರ್ವೆ ನಂ. 11 ರ 1969-1974 ನೇ ಸಾಲಿನ ಪಹಣಿ | ನಿಪಿ 9 |
| 10 | ಸರ್ವೆ ನಂ. 11 ರ 1979-1985 ನೇ ಸಾಲಿನ ಪಹಣಿ<br>ಸದರಿ ದಾಖಲೆ ಸಂಪೂರ್ಣವಾಗಿ ಕಪ್ಪು ಮಿಶ್ರಿತವಾಗಿದ್ದು ಓದಲು ಅಸಾಧ್ಯವಾಗಿರುತ್ತದೆ. | ನಿಪಿ 10 |
| 11 | ಆರು ಬಾವಚಿತ್ರಗಳು<br>ರುಜುವಾತಿನ ಷರತ್ತಿಗೊಳಪಟ್ಟು ನಿಶಾನೆಗೊಳಪಡಿಸಲಾಗಿದೆ | ನಿಪಿ 11 ರಿಂದ 16 |
| 12 | ಒಂದು ಸಿಡಿ<br>ರುಜುವಾತಿನ ಷರತ್ತಿಗೊಳಪಟ್ಟು ನಿಶಾನೆಗೊಳಪಡಿಸಲಾಗಿದೆ | ನಿಪಿ 17 |

ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.